# ಏನೇನೋ ಆಗುತ್ತದೆ...



ತಮ್ಮಣ್ಣ ಬೀಗಾರ
ಕಲೆ: ಸಂತೋಷ್ ಸಸಿಹಿತ್ಲು

ರವಿ ಈ ದಿನ ಶಾಲೆಗೆ ಹೋಗಬೇಕು ಅಂತಲೇ ಯೋಚಿಸಿದ್ದ. ಆದರೆ ಈ ದಿನವೂ ಅವನು ಶಾಲೆಗೆ ಹೋಗಲಾಗಲಿಲ್ಲ. ಕಳೆದ ವರ್ಷವೆಲ್ಲ ಹೀಗಿರಲಿಲ್ಲ. ರವಿ ಒಂದು ದಿನವೂ ಶಾಲೆಯನ್ನು ತಪ್ಪಿಸಿರಲಿಲ್ಲ. ಅಪ್ಪ ಆಗಾಗ ರವಿಗೆ ಹೇಳುತ್ತಲೇ ಇರುತ್ತಿದ್ದ. 'ನೀನು ಚೆನ್ನಾಗಿ ಓದಬೇಕು. ನಾನು ಬಹಳ ವರ್ಷಗಳಿಂದ ನೋಡುತ್ತಿದ್ದೇನೆ. ನಮ್ಮ ಕೇರಿಯ ಯಾವ ಮಕ್ಕಳೂ ಎಸ್‌ಎಸ್‌ಎಲ್‌ಸಿ ಮುಗಿಸಿಯೇ ಇಲ್ಲ. ನಮ್ಮ ಶಾಲೆಯ ದೇವಪ್ಪ ಮಾಸ್ಟರ್ ಎಷ್ಟು ಸಾರಿ ನಮ್ಮ ಕೇರಿಗೆ ಬಂದು ಹೋಗುತ್ತಾರೋ... ಅವರ ಮುಖವನ್ನು ನೋಡಿದಾಗ ನನಗೆ ನಾಚಿಕೆಯಾಗುತ್ತದೆ. ಶಾಲೆ ತಪ್ಪಿಸುವ ನಮ್ಮ ಕೇರಿಯ ಮಕ್ಕಳ ಬಗ್ಗೆ ನನ್ನಲ್ಲಿ ಉದ್ದಕ್ಕೆ ಹೇಳುತ್ತಾರೆ. ಆದರೆ ನನ್ನ ಮಾತನ್ನು ಯಾರು ಕೇಳುತ್ತಾರೆ? ನೀನು ಮಾತ್ರ ಚೆನ್ನಾಗಿ ಓದಿ ಜಾಣ ಆಗಬೇಕು. ಶಾಲೆ ತಪ್ಪಿಸಬಾರದು' ಎಂದಲ್ಲ ಪದೇಪದೇ ಹೇಳುತ್ತಲೇ ಇರುತ್ತಿದ್ದ. ಅಪ್ಪನ ಮಾತು ನೆನಪಾಗುತ್ತಲೇ ರವಿಗೆ ಹಿಂದಿನ ನೆನಪು ಮತ್ತೆ ಬಂತು...

ಆಗಷ್ಟೇ ಮೇ ತಿಂಗಳ ರಜೆ ಮುಗಿದು ಶಾಲೆ ಶುರುವಾಗಿ ಒಂದು ವಾರವಾಗಿರಬೇಕು. ರವಿ ಶಾಲೆ ಶುರುವಾದ ಮೊದಲ ದಿನದಿಂದಲೇ ಶಾಲೆಗೆ ಬರುತ್ತಿದ್ದ.

